

# ಐವತ್ತರ ಗಡಿ ಮುಟ್ಟಿದ ನನ್ನ 'ತಲೆ'ಹರಟೆ

ನನ್ನ 'ಹರಟೆ'ಗಳ ತಲೆಹರಟೆ ಐವತ್ತರ ಗಡಿಯನ್ನು ತಲುಪಿದೆ! ಸಮಸ್ತ ಕನ್ನಡಿಗರ ಸುವರ್ಣ ಕರ್ನಾಟಕದ ಸಂಭ್ರಮದಲ್ಲಿ ನನ್ನಂತಹ ಅಲ್ಪನ ತಲೆ'ಹರಟೆ'ಗಳದ್ದೂ ಒಂದು ಸುವರ್ಣ ಮಹೋತ್ಸವ ;-)

'ಪರಿಣೀತ'ದಿಂದ 'ಕೊಡಚಾದ್ರಿ'ಯ ವರೆಗೆ ಮೊದಲ ಇಪ್ಪತ್ತೈದು ಹರಟೆಗಳು ಆ ನಂತರ 'ಬರೆಯುವೆ ನಿನಗಾಗಿ'ಯಿಂದ 'ಕನ್ನಡ ಎನೆ' ತನಕ ಇಪ್ಪತ್ತೈದು ಹರಟೆಗಳು. ಈ ಕೊನೆಯ ಇಪ್ಪತ್ತೈದು ಹರಟೆಗಳಿಗೆ ನಾನು ತೆಗೆದುಕೊಂಡದ್ದು ಒಂದು ವರ್ಷದ ಅವಧಿ.

**ಎಲ್ಲಕ್ಕಿಂತ ಮೊದಲು ನನ್ನ ಹರಟೆಯನ್ನು ಓದಿ, (ನನಗೇ ತಿಳಿಯದಂತೆಯೂ) ಮೆಚ್ಚಿ, ಅವರಿವರಿಗೆ ಕಳಿಸಿ, ಮತ್ತೆ ಕೆಲವೊಮ್ಮೆ ನನಗೇ ಫಾರ್ವರ್ಡಿಸಿ ಮೆಚ್ಚುಗೆ ಮೆರೆದ, ವಿಮರ್ಶೆ ಬರೆದ ನಿಮಗೆಲ್ಲ (ತನ್ಮೂಲಕ ನಿಮ್ಮಿಂದ ಕಳಿಸಿಕೊಂಡು ಓದಿದ ನಿಮ್ಮ ಸ್ನೇಹಿತರಿಗೂ, ಅವರ ಸ್ನೇಹಿತರಿಗೂ, ಅವರ ಸ್ನೇಹಿತರ ಸ್ನೇಹಿತರಿಗೂ) ನನ್ನ ಧನ್ಯವಾದಗಳು.**

ನಿಜ ಹೇಳಬೇಕೆಂದರೆ ಇಪ್ಪತ್ತೈದರ ನಂತರ, ಮೊದಲ ಹರಟೆಗಳನ್ನು ಬರೆಯುವಾಗ ಇದ್ದ 'ಆರಂಭದ ದಿಗಿಲು' ಇರಲಿಲ್ಲ. ಇದ್ದುದೊಂದೇ ಒಂದು–ಮೊದಲ ಇಪ್ಪತ್ತೈದು 'ಹರಟೆ'ಗಳ ಓಘವನ್ನು, ಭಾವತೀವ್ರತೆಯನ್ನು ಮುಂದೆಯೂ ಉಳಿಸಿಕೊಂಡೇನೆಯೇ ಎಂಬ ಭಯ. ಇನ್ನೂ ಮುಂದಕ್ಕೆ ಬರೆಯಲು ವಿಷಯಗಳನ್ನು ಹುಡುಕುವುದಾದರೂ ಹೇಗೆ ಅನ್ನೋ ಸಣ್ಣ ಭಯವೂ ಬೇರೆ! ಕಡೆಗೆ, ನಾನಾಗೇ ವಿಷಯಗಳನ್ನು ಅರಸಿ ಬರೆದರೆ ಲೇಖನವಾಗುತ್ತದೆ, ನಿಬಂಧವೋ ಪ್ರಬಂಧವೋ ಆಗುತ್ತದೆ, ಅದೆಲ್ಲ ಬೇಡ ಇದು ನನ್ನ ತಲೆ'ಹರಟೆ'ಯಾಗಿಯೇ ಉಳಿಯಲಿ, ವಾರವಾಗಲೀ, ತಿಂಗಳಾಗಲೀ ಮನಸಿಗೆ ಬಾರದೇ, ಹೃದಯಕ್ಕೆ ಒದಗದೇ ಬರೆಯುವುದೇ ಬೇಡ ಎಂದು ನಿರ್ಧಾರ ಮಾಡಿಕೊಂಡೆ. (ಅದಕ್ಕೇ ಇಪ್ಪತ್ತೈದು ಹರಟೆಗಳಿಗೆ ಐವತ್ತು ವಾರಗಳಿಗೂ ಹೆಚ್ಚು ಸಮಯ ತೆಗೆದುಕೊಂಡಿದ್ದು.) ಯಾವ ವಿಷಯದ ಬಗ್ಗೆ ಬರೆದರೂ ಅದು ನನ್ನ ಸ್ವಂತ ಅಭಿಪ್ರಾಯವಾಗಬೇಕೇ ಹೊರತು, ಬೇರೆಯವರ ಅಭಿಪ್ರಾಯಗಳನ್ನು, ನಿರ್ಧಾರಗಳನ್ನು ರೂಪಿಸುವ, ಬದಲಿಸುವ ಲೇಖನವಾಗಬಾರದು. ಓದಿ, ಹಗುರಾಗಿ (ಮರೆತೂ) ಬಿಡುವಂತೆ ಬರೆಯಬೇಕು ಅಂತೆಲ್ಲ (ಮೊದಲು ಅಂದುಕೊಂಡಿದ್ದಂತೆಯೇ) ಅಂದುಕೊಂಡೇ ಮೆಲ್ಲಮೆಲ್ಲನೆ ಬರೆದೆ, ಐವತ್ತರ ಗಡಿ ತಲುಪಿದೆ.

ಈ ಬಾರಿ ನನಗೆ ಬಹಳ ಇಷ್ಟವಾದ ಹರಟೆ 'ಸಾಗರ ಸಮ್ಮುಖ'. ಇದು ಬೇರೆಲ್ಲ ಹರಟೆಗಳಿಗಿಂತ ನನ್ನ ಹೃದಯಕ್ಕೆ ಹತ್ತಿರವಾದ ಹರಟೆ. ಹೆಚ್ಚು ಮೆಚ್ಚುಗೆ ಪಡೆದದ್ದೂ ಇದೇ. 'ಸಾಗರ ಸಮ್ಮುಖ' ಬರೆದ ಒಂದೂವರೆ ತಿಂಗಳಾದರೂ ಅದರ ಬಗ್ಗೆ ಮೆಚ್ಚುಗೆಯ, ಅಚ್ಚರಿಯ ಮೇಯ್ಲುಗಳು, ಕರೆಗಳೂ ಬರುತ್ತಲೇ ಇದ್ದವು. ಹೊಸ ಹೊಸ ಸ್ನೇಹಿತರು, ಸ್ನೇಹಿತೆಯರೆಲ್ಲ ಫೋನ್ ಮಾಡಿ ಸಂಭ್ರಮಿಸಿದರು. 'ನಾನೂ ನಿನ್ನೊಟ್ಟಿಗೆ ಸಮುದ್ರ ತೀರಕ್ಕೆ ಬರಬೇಕು, ನೀನೂ ಸಮುದ್ರವೂ ಒಬ್ಬರಿಗೊಬ್ಬರು ಹೇಗೆ ರಿಲೇಟ್ ಆಗ್ತೀರಾ ಅಂತ ನೋಡಬೇಕು. ಯಾವಾಗ ಕರ್ಕೊಂಡು ಹೋಗ್ತೀಯಾ?' ಅಂತೆಲ್ಲ ಕರಾರು ಹಾಕಿದರು. 'ಸಾಗರ ಸಮ್ಮುಖ' ಮೊದಲಿದ್ದ (ಅದುವರೆಗೂ ಹೆಚ್ಚಿನ ಮೆಚ್ಚಿಗೆಯ ಮೇಯ್ಲುಗಳನ್ನು ಪಡೆದಿದ್ದ 'ಹೆಸರಿಲ್ಲದ ಒಂದು ಸ್ವಗತ'ಕ್ಕಿಂತ) ದಾಖಲೆಗಳನೆಲ್ಲ ಮುರಿದು ಮುನ್ನುಗ್ಗಿತು. ತನ್ನ ಛವಿಯಿನ್ನೂ ಇದೆಯೆಂಬಂತೆ ಕೆಲವರಿಂದ ಬಹಳ ತಡವಾಗಿ ಓದಿಸಿಕೊಂಡ 'ಹೆಸರಿಲ್ಲದ ಒಂದು ಸ್ವಗತ' (ನನ್ನ ಮೂರನೆಯ ಹರಟೆ) ಕೂಡಾ ಮೆಚ್ಚುಗೆಯ ಮೇಯ್ಲುಗಳಾಗಿ ನನ್ನ ಇನ್‌ಬಾಕ್ಸ್ ಸೇರಿತು.

'ಕೀಲಿಕೈ'ಯ ತಂತ್ರಕ್ಕೆ, 'ಬಾಳೇಕಾಯಲ್ಲಿರೋ ಬದನೇಕಾಯಿ'ಯ ಅಜ್ಜಿಕತೆಗೆ, 'ಜಲಸ್ಥಂಭನ' ಹೊರಡಿಸುವ ವಿವಿದ ಧ್ವನಿಗಳಿಗೆ, 'ಸ್ನೇಹ ಅತಿ ಮಧುರ'ದ ಮಧುರ ಭಾವಗಳಿಗೆಲ್ಲ ದೇಶ, ವಿದೇಶಗಳಿಂದ ಸಾಕಷ್ಟು ಮೇಯ್ಲುಗಳು, ಕರೆಗಳು ಬಂದಿವೆ, 'ಓಹೋ,

ಇದು ಹೀಗೂ ಧ್ವನಿ ಹೊರಡಿಸುತ್ತದೆ, ಹೀಗೂ ಅರ್ಥವಾಗುತ್ತದೆ, ಹೀಗೂ ಮನದಟ್ಟುತ್ತದೆ' ಎಂದು ನನಗೇ ನಾನೇ ಅಚ್ಚರಿಯಾಗುವಂತಹ ವಸ್ತುನಿಷ್ಠ ವಿಮರ್ಶೆಗಳೂ ಬಂದಿವೆ. ನಾನು ತುಂಬಾ ಯೋಚಿಸಿ, ಲೆಕ್ಕಾಚಾರದಲ್ಲಿ ಬರೆದ 'ಸಂಜೆಬಾನಿನಂಚಿನಲ್ಲಿ...' ಕೂಡ ಬಹಳಷ್ಟು ಮೆಚ್ಚುಗೆ ಗಳಿಸಿ, 'ಸಂತೆಯ ವೇಳೆಗೊಂದು ಮೊಳ' ಹೊಸೆಯುವಂತೆ ಹರಟೆ ಬರೆಯುವುದೂ ಮೆಲ್ಲನೆ ನನ್ನ ಕೈಗೂಡುತ್ತಿದೆ ಎಂಬ ಹೆಮ್ಮೆ ಮೂಡಿಸಿದೆ!

ಸಾಕಷ್ಟು ಮೇಯ್ಲುಗಳು, ಕರೆಗಳು ನನಗೆ ಗೊತ್ತಿರುವ ನನ್ನ ಸ್ನೇಹಿತರಿಂದ ಬಂದಂತೆಯೇ ಗೊತ್ತಿರದ, ಊಹಿಸಿರದ, ನಿರೀಕ್ಷೆಯಿಲ್ಲದ ಕಡೆಯಿಂದೆಲ್ಲ ಬಂದಿವೆ, ನನಗೆ ಖುಷಿ ಕೊಟ್ಟಿವೆ, ಉಬ್ಬಿಸಿವೆ, ಎಚ್ಚರಿಸಿವೆ. **ಅವೆಲ್ಲ ಮೇಯ್ಲುಗಳಿಗೂ, ಕರೆಗಳಿಗೂ ಮತ್ತು ನನಗೂ ಹೇಳದಂತೆ (ನನಗೆ ಹೇಳದಿದ್ದರೂ) ನಿಮ್ಮ ಮನದೊಳಗೇ ಹುಟ್ಟಿಕೊಂಡ ಮೆಚ್ಚುಗೆಗೂ, ಸ್ನೇಹಭಾವಕ್ಕೂ, ಪ್ರೀತಿಗೂ (ಅಸೂಯೆಗೂ!) ನಾನು ಋಣಿ.**

ಮುಂದೆಯೂ ಹೀಗೇ ಹರಟೆಹೊಡೆಯುತ್ತ, ನಿಮ್ಮೆಲ್ಲರ ತಲೆ ತಿನ್ನುತ್ತ ಇರಬೇಕೆಂದುಕೊಂಡಿದ್ದೇನೆ. ಇದುವರೆಗೂ ಬರೆದುದನ್ನೆಲ್ಲ ಕೆಳಗೆ ಕೊಟ್ಟಿರುವ ನನ್ನದೇ ವೆಬ್‌ಸೈಟ್‌ನಲ್ಲಿ ಹಾಕಿಕೊಂಡಿದ್ದೇನೆ.

(ಯಥಾ ಪ್ರಕಾರ ಮುಂದೇನು ಬರೆಯುವುದು, ಇನ್ನೂ ಮುಂದಕ್ಕೆ ವಿಷಯಗಳನ್ನು ಎಲ್ಲಿಂದ ಹುಡುಕುವುದು ಎಂಬ ಸಣ್ಣ ಭಯ ಶುರುವಾಗಿದೆ. ತಲೆ'ಹರಟೆ'ಗೂ ಮೀರಿ ಬೇರೆ ಏನನ್ನಾದರೂ ಬರೆಯಬೇಕೆಂದು ಸ್ನೇಹಿತರೆಲ್ಲ ಒತ್ತಾಯಿಸುತ್ತಿದ್ದಾರೆ, ನನಗೂ ಅನಿಸುತ್ತಿದೆ. ಸಿದ್ಧತೆಗಳು ಸಣ್ಣಗೆ, ಸೋಮಾರಿತನದಲ್ಲೇ ಶುರುವಾಗಿವೆ,)

*Future, in all its secrecy & unexpectedness*
*Holds the keys to our happiness,*
*Our sorrow, our hopes and our own future…*

**ಧನ್ಯವಾದಗಳು!**

**ಶಿವಕುಮಾರ ಕೆ. ಎಸ್.** *ks_shivu@yahoo.com*

**9845979767 | http://shivakumara.50webs.com**

(ನನ್ನೆಲ್ಲ ಬರಹಗಳ ಸಂಗ್ರಹ)